**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.409/2017**

ಫಿರ್ಯಾದಿ: ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸರು, ಸೇಡಂ.

-:: ವಿರುದ್ಧ ::-

ಆರೋಪಿ: ಸುಬಣ್ಣ ತಂದೆ ಶರಣಪ್ಪಾ,
ವಃ 49 ವರ್ಷ, ಉಃ ಕೂಲಿ ಕೆಲಸ,
ಸಾಃ ಆಶ್ರಯ ಕಾಲೋನಿ, ಸೇಡಂ.

----

**ದೋ ಷಾ ರೋ ಪ ಣೆ**

ನಾನು ಶ್ರೀ ಮಹಾದೇವ ಕಾನಟ್ಟಿ, ಬಿಕಾಂ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ಆರೋಪಿತನಾದ ನೀನು ದಿನಾಂಕ 22-01-2014 ರಂದು ರಾತ್ರಿ 7.30 ಗಂಟೆ ಸುಮಾರಿಗೆ ಸೇಡಂ ಠಾಣಾ ಹದ್ದಿಯಲ್ಲಿರುವ ಸೇಡಂ ಪಟ್ಟಣದ ಆಶ್ರಯ ಕಾಲೋನಿಯ ಆರೋಪಿತನಾದ ನಿನ್ನ ಮನೆಯಲ್ಲಿ ಅಕ್ರಮವಾಗಿ ಕಲಬೆರಕೆ ಸೇಂದಿಯನ್ನು ಯಾವುದೇ ಪರವಾನಿಗೆ ಇಲ್ಲದೇ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾಗ, ಚಾಸಾ-5, 3, 6 ರವರು ಕೂಡಿಕೊಂಡು, ಚಾಸಾ-1 ಮತ್ತು 2 ನೇದ್ದವರ ಸಮಕ್ಷಮದಲ್ಲಿ ದಾಳಿ ಮಾಡಿ, ಆರೋಪಿತನಾದ ನಿನ್ನ ವಶದಲ್ಲಿದ್ದ ಒಂದು ಗೊಬ್ಬರದ ಚೀಲದಲ್ಲಿ ಒಂದು ಲೀಟರ್ ಅಳತೆಯ ಒಟುಟ 25 ಲೀಟರ್ ಕಲಬೆರಕೆ ಸೇಂದಿಯನ್ನು ವಶಪಡಿಸಿಕೊಂಡಿದ್ದು, ಅಲ್ಲದೇ ಸದರಿ ಕಲಬೆರಕೆ ಸೇಂದಿ ಸೇವನೆಯಿಂದ ಮಾನವ ಜೀವಕ್ಕೆ ಹಾನಿಯಾಗುತ್ತದೆಂದು ಗೊತ್ತಿದ್ದರೂ ಸಹ ಕಲಬೆರಕೆ ಸೇಂದಿ ಮಾರಾಟ ಮಾಡಿದ್ದರಿಂದ, ಕಾರಣ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ಹಾಗೂ ಭಾ.ದಂ.ಸಂ. 273 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಪ್ರ.ದ.ನ್ಯಾ.ದಂ. ಸೇಡಂ.

ದಿನಾಂಕಃ 31-12-2019